2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 29/2023

| | | |
|---|---|---|
| ಸಾಕ್ಷಿದಾರರ ಹೆಸರು | - ಸತೀಶ್ | ಪಿಡಬ್ಲೂ -4 |
| ತಂದೆಯ ಹೆಸರು | - ನಪೂರ್ | ಸಿಡಬ್ಲೂ -9 |
| ವಯಸ್ಸು | - 36 ವರ್ಷ | |
| ಉದ್ಯೋಗ | - ಕೂಲಿ | |
| ವಾಸ ಸ್ಥಳ | - ಅಂದಗಾರು, ಸೋಮಲಾಪುರ, ಕೊಪ್ಪ | |

ದಿನಾಂಕಃ 03.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಮೃತ ಯಶೋಧ ನನ್ನ ಚಿಕ್ಕಮ್ಮ. ಅಂದರೆ ನನ್ನ ತಾಯಿಯ ತಂಗಿ. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಗೊತ್ತು. ಆತ ನನ್ನ ಚಿಕ್ಕಮ್ಮನಾದ ಯಶೋಧಾಳ ಎರಡನೇ ಗಂಡ. ಫ್ರಾಸಾ.1 ಮೃತಳ ಮಗ. ಫ್ರಾಸಾ.2 ನನ್ನ ಸಂಬಂದಿ. ಚಾಸಾ.4 ಮತ್ತು 5 ಗೊತ್ತು ಅವರು ಮೃತಳ ಅಕ್ಕಪಕ್ಕದ ಮನೆಯವರು. ಚಾಸಾ.8 ನನ್ನ ಚಿಕ್ಕಮ್ಮ. ಚಾಸಾ.10 ನನ್ನ ಸಂಬಂದಿ. ಚಾಸಾ.11 ಮತ್ತು 12 ಗೊತ್ತು. ಫ್ರಾಸಾ.3 ಗೊತ್ತು. ಆತ ಮೃತ ಯಶೋಧ ಮತ್ತು ಆರೋಪಿಯ ಮಗ. ಚಾಸಾ.14 ರಿಂದ 18 ಗೊತ್ತು. ಅವರು ನನ್ನ ಸಂಬಂಧಿಕರು.

2. ನನ್ನ ತಾಯಿಗೆ ಒಟ್ಟು 4 ಜನ ಅಕ್ಕತಂಗಿಯರು. ಅವರ ಪೈಕಿ ಮೃತ ಯಶೋಧ ನಾಲ್ಕನೆಯವರು. ಯಶೋಧ ಮೃತ ಪಡುವ 30 ವರ್ಷಗಳ ಹಿಂದೆ ಆಕೆಯ ಮದುವೆ ರಮೇಶ್ ಎಂಬುವವರ ಜೊತೆ ನಡೆದಿತ್ತು. ಅವರಿಗೆ ಫ್ರಾಸಾ.1 ಜನಿಸಿರುತ್ತಾನೆ. ಫ್ರಾಸಾ.1 ರವರಿಗೆ ಒಂದು ವರ್ಷವಾಗಿದ್ದಾಗ

ರಮೇಶ್‌ರವರು ಮೃತಪಟ್ಟಿರುತ್ತಾರೆ. ನಂತರ ಯಶೋಧ ಹೊನ್ನಗುಂಡಿಯಲ್ಲಿರುವ ನೀಲಿಖಾನ್ ಎಸ್ಟೇಟ್ ನಲ್ಲಿ ಕೂಲಿ ಕೆಲಸ ಮಾಡಿಕೊಂಡು ತನ್ನ ಮಗನಾದ ಫ್ರಾಸಾ.1 ರವರೊಂದಿಗೆ ಅಲ್ಲಿಯೇ ವಾಸವಾಗಿದ್ದರು. ಯಶೋದ ಮೃತ ಪಡುವ 10 ರಿಂದ 11 ವರ್ಷಗಳ ಹಿಂದೆ ಆಕೆ ಮತ್ತು ಆರೋಪಿ ಪ್ರೀತಿಸಿ ಮದುವೆಯಾಗಿದ್ದರು. ಆರೋಪಿ ಹೊನ್ನಗುಂಡಿಯ ವಾಸಿ. ಯಶತೋಧ ಆರೋಪಿಯನ್ನು ಮದುವೆ ಮಾಡಿಕೊಂಡ ಬಳಿಕ ಫ್ರಾಸಾ.1 ಆಕೆಯನ್ನು ಬಿಟ್ಟು ಹಾಂದಿಯಲ್ಲಿ ಇರುವ ಎಸ್ಟೇಟ್ ನಲ್ಲಿ ಕೂಲಿ ಕೆಲಸ ಮಾಡಿಕೊಂಡು ಅಲ್ಲಿಯೇ ವಾಸವಾಗಿದ್ದನು. ಯಶೋದ ಆರೋಪಿಯನ್ನು ಮದುವೆ ಮಾಡಿಕೊಂಡ ಬಳಿಕ ಆತನೊಂದಿಗೆ ಹೊನ್ನಗುಂಡಿಯಲ್ಲಿರುವ ಆತನ ಮನೆಯಲ್ಲಿ ವಾಸವಾಗಿದ್ದಳು. ಆರೋಪಿ ಮತ್ತು ಯೆಶೋಧಾಳಿಗೆ ಫ್ರಾಸಾ.3 ಧನುಶ್ ಎಂಬ ಮಗನಿದ್ದಾನೆ.

3. ಯಶೋದ ಆರೋಪಿಯನ್ನು ಮದುವೆ ಮಾಡಿಕೊಂಡ ಬಳಿಕ ಫ್ರಾಸಾ.1 ರವರು ಯಶೋದಳಿಗೆ ಆಗಾಗ್ಗೆ ಫೋನ್ ಮಾಡಿ ವಿಚಾರಿಸುತ್ತಿದ್ದನು ಮತ್ತು ಅವರು ಹೇಗೆ ಇದ್ದಾರೆ ಎಂದು ನನಗೆ ಫ್ರಾಸಾ.1 ರವರಿಂದ ತಿಳಿಯುತ್ತಿತ್ತು. ದಿ.16.11.2022 ರಂದು ನಾನು ಅಂದಗಾರಿನಲ್ಲಿ ಇರುವ ನಮ್ಮ ಮನೆಯಲ್ಲಿ ಇದ್ದೆನು. ಆಗ ಬೆಳಗ್ಗೆ 8-30 ಗಂಟೆ ಸುಮಾರಿಗೆ ಚಾಸಾ.11 ರವಿರವರು ನನಗೆ ಫೋನ್ ಮಾಡಿ ಯಶೋಧರವರು ಹೊನ್ನಗುಂಡಿಯಲ್ಲಿ ಮೃತಪಟ್ಟಿರುವುದಾಗಿ ತಿಳಿಸಿದರು. ನಂತರ ನಾನು, ಚಾಸಾ.10 ಮತ್ತು ಚಾಸಾ.8 ರವರು ಅದೇ ದಿನ ಹೊನ್ನಗುಂಡಿಯಲ್ಲಿರುವ ಆರೋಪಿಯ ಮನೆಗೆ ಹೋದೆವು.

4. ಅಲ್ಲಿ ಆರೋಪಿಯ ಅಕ್ಕಪಕ್ಕದ ಮನೆಯವರು ಇದ್ದರು. ಅಲ್ಲಿಗೆ ಜಯಪುರ ಪೋಲೀಸರು ಬಂದಿದ್ದರು. ಆರೋಪಿಯ ಮನೆಯಲ್ಲಿರುವ ಮೊದಲನೇ ರೂಮಿನಲ್ಲಿ ಯಶೋದಳ ಶವ ಇತ್ತು. ನಾನು ನೋಡಿದಾಗ ಯಶೋದಳ ಮೂಗಿಗೆ ಪೆಟ್ಟಾಗಿ ರಕ್ತ ಬಂದು ಹೆಪ್ಪುಗಟ್ಟಿತ್ತು. ಆಕೆಯ ಎಡಗಣ್ಣಿನ ಸುತ್ತು ಕಪ್ಪಗಾಗಿತ್ತು. ಆಕೆಯ ತಲೆಯ ಹಿಂಬಾಗದಲ್ಲಿ ಪೆಟ್ಟಾಗಿತ್ತು. ಆಕೆಯ ಕುತ್ತಿಗೆಯ ಭಾಗ ಕಪ್ಪಾಗಿತ್ತು. ಅಲ್ಲಿ ಫ್ರಾಸಾ.3 ಇದ್ದನು. ಆತನನ್ನು ಕುರಿತು ಏನಾಯಿತು ಎಂದು ನಾನು ಕೇಳಿದಾಗ ಫ್ರಾಸಾ.3 ರವರು ಹಿಂದಿನ ದಿನ ಅಂದರೆ ದಿ.15.11.2022 ರ ರಾತ್ರಿ ಯಶೋದ ಮತ್ತು ಆರೋಪಿಯು ಗಲಾಟೆ ಮಾಡಿಕೊಳ್ಳುತ್ತಿದ್ದಾಗಿ ಆಗ ಆತ ಯಶೋಧಾಳಿಗೆ ಬಿ.ಪಿ. ಮಾತ್ರೆಯನ್ನು ಕೊಟ್ಟಿದ್ದಾಗಿ ಆಕೆ ಅದನ್ನು ನುಂಗಿ ಮಲಗಿಕೊಂಡಿದ್ದಾಗಿ ತಿಳಿಸಿದನು. ಮಾರನೆ ದಿನ ಫ್ರಾಸಾ.3 ರವರು ಎದ್ದು ಯಶೋದಳನ್ನು ಎಬ್ಬಿಸಿದಾಗ ಆಕೆ ಎಚ್ಚರಗೊಳ್ಳದಿದ್ದಾಗ ಅಕ್ಕಪಕ್ಕದವರನ್ನು ಕರೆದಿದ್ದಾಗಿ ಫ್ರಾಸಾ.3 ನನಗೆ ತಿಳಿಸಿದನು. ಆರೋಪಿ ಮತ್ತು ಯಶೋದಳ ಅಕ್ಕಪಕ್ಕದ ಮನೆಯವರು ಹಿಂದಿನ ದಿನ ರಾತ್ರಿ ಆರೋಪಿ ಮತ್ತು ಯೆಶೋಧಾಳ ನಡುವ ಗಲಾಟೆಯಾಗುತ್ತಿದ್ದಾಗಿ ಮಾತನಾಡಿಕೊಳ್ಳುತ್ತಿದ್ದರು.

5. ನಂತರ ಜಯಪುರ ಪೋಲೀಸರು ನನ್ನನ್ನು ಯಶೋಧಾಳ ಸಾವಿನ ಬಗ್ಗೆ ವಿಚಾರಿಸಿದರು. ಆಗ ನಾನು ಆ ಬಗ್ಗೆ ಮೇಲೆ ಹೇಳಿದಂತೆ ನನಗೆ ಗೊತ್ತಿದ್ದ ವಿಚಾರವನ್ನು ತಿಳಿಸಿ ಹೇಳಿಕೆ ನೀಡಿರುತ್ತೇನೆ. ಮೇಲೆ ಹೇಳಿದಂತ ಗಾಯಗಳು ಯಶೋದಾಳ ಶವದ ಮೇಲೆ ಕಂಡು ಬಂದಿದ್ದರಿಂದ ಆರೋಪಿಯೇ ಆಕೆಯ

ಕತ್ತನ್ನು ಹಿಸುಕಿ ಮತ್ತು ಹೊಡೆದು ಕೊಲೆ ಮಾಡಿರಬಹುದು ಎಂದು ಆಕೆಯ ಸಾವಿನ ಬಗ್ಗೆ ಪೋಲೀಸರಿಗೆ ತಿಳಿಸಿರುತ್ತೇನೆ. ಸಾಕ್ಷಿಯು ಈಗಾಗಲೇ ನಿಪಿ.3 ಮತ್ತು 4 ಎಂದು ಗುರುತಿಸಲ್ಪಟ್ಟಿರುವ ಪೋಟೋಗಳಲ್ಲಿ ಯಶೋಧಾಳ ಶವ ಮತ್ತು ಆಕೆ ಮೈಮೇಲೆ ನಾನು ಮೇಲೆ ಹೇಳಿದಂತಹ ಗಾಯಗಳು ಕಂಡು ಬರುವುದಾಗಿ ನುಡಿದಿರುತ್ತಾರೆ.

6. ಅದಾದ 2 ತಿಂಗಳ ನಂತರ ನಾನು ಜಯಪುರ ಪೋಲೀಸ್ ಠಾಣೆಗೆ ಯೆಶೋದಾಳ ಸಾವಿನ ಬಗ್ಗೆ ತಿಳಿದುಕೊಳ್ಳಲು ಹೋಗಿದ್ದೆನು. ಅಲ್ಲಿಗೆ ಹೋದಾಗ ಯಶೋದಾಳ ಮರಣೋತ್ತರ ಪರೀಕ್ಷಾ ವರದಿಯಲ್ಲಿ ಆಕೆಯನ್ನು ಆಕೆಯ ಕತ್ತನ್ನು ಹಿಸುಕಿ ಸಾಯಿಸಿರುವುದಾಗಿ ವರದಿ ಬಂದಿರುವುದಾಗಿ ಪೋಲೀಸರಿಂದ ತಿಳಿಯಿತು. ಆ ಬಗ್ಗೆ ನಾನು ಪೋಲೀಸರಿಗೆ ಪುನಃ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲು: ಶ್ರೀ.ಎನ್.ಡಿ. ವಕೀಲರಿಂದಃ ಆರೋಪಿಯ ಪರವಾಗಿಃ-</u>

**7.** ಈ ದಿನ ನ್ಯಾಯಲಾಯದ ಕರ್ತವ್ಯದಲ್ಲಿ ಇರುವ ಜಯಪುರ ಪೋಲೀಸ್ ಸಿಬ್ಬಂದಿಯನ್ನು ಸಾಕ್ಷಿಗೆ ತೋರಿಸಿ ಅವರು ನಿಮಗೆ ಗೊತ್ತೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆರೋಪಿ ಮತ್ತು ಯೆಶೋದ ಮದುವೆಯಾದಾಗಿನಿಂದ ಸುಖವಾಗಿ ಸಂಸಾರ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿ ಮತ್ತು ಯಶೋಧ ಪ್ರೀತಿಸಿ ಮದುವೆಯಾಗಿದ್ದರಿಂದ ನಿಮಗೆ ಮತ್ತು ನಿಮ್ಮ ಕುಟುಂಬದವರಿಗೆ ಆರೋಪಿಯನ್ನು ಕಂಡರೆ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ಊರಿನಿಂದ ಆರೋಪಿ ಮತ್ತು ಯಶೋಧ ವಾಸವಿದ್ದ ಹೊನ್ನಗುಂಡಿಗೆ ಸುಮಾರು 32

ಕಿ.ಮೀ. ದೂರವಾಗುತ್ತದೆ. ಫ್ರಾಸಾ.1 ರವರ ಮೊಬೈಲ್ ಸಂಖ್ಯೆ ನನ್ನ ಮೊಬೈಲ್ ನಲ್ಲಿ ಇರುತ್ತದೆ ಅದನ್ನು ನೋಡದೆ ನನಗೆ ಹೇಳಲು ಆಗುವುದಿಲ್ಲ. ಫ್ರಾಸಾ.1 ರವರ ಜೊತೆ ನೀವು ಪೋನಿನಲ್ಲಿ ಮಾತನಾಡಿರುವುದನ್ನು ಹೊರತುಪಡಿಸಿ ಯೆಶೋದ ಆರೋಪಿಯನ್ನು ಮದುವೆಯಾದ ಬಳಿಕ ನೀವು ಆಕೆಯನ್ನು ಖುದ್ದಾಗಿ ಬೇಟಿಯಾಗಿಲ್ಲ ಮತ್ತು ಆಕೆಯೊಂದಿಗೆ ಖುದ್ದಾಗಿ ಮಾತನಾಡಿಲ್ಲ ಎಂದರೆ ಸರಿಯಲ್ಲ.

**8.** ಆ ದಿನ ನಮ್ಮ ಜೊತೆ ಚಾಸಾ.8 ಮತ್ತು ಚಾಸಾ.10 ರವರು ಆರೋಪಿಯ ಮನೆಗೆ ಬಂದರು. ಉಳಿದವರು ಬೇರೆ ಕಡೆಯಿಂದ ಬಂದರು. ಮೃತ ಯಶೋಧಳಿಗೆ ಮದ್ಯ ಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸರಿಯಲ್ಲ. ಆಕೆಗೆ ಮದ್ಯಪಾನ ಮಾಡುವ ಅಭ್ಯಾಸ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಯಶೋದಾಳಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಆಕೆ ಮದ್ಯಪಾನ ಮಾಡಿ ಕಾಫಿ ತೋಟದಲ್ಲಿ ಕೆಲಸ ಮಾಡುವ ಸಮಯದಲ್ಲಿ ಕಾಫಿ ಗಿಡಗಳ ಮೇಲೆ ಬಿದ್ದು ಪೆಟ್ಟು ಮಾಡಿಕೊಂಡಿದ್ದ ವಿಚಾರ ನಿಮಗೆ ತಿಳಿದಿತ್ತೇ ಎಂದರೆ ಸಾಕ್ಷಿಯು ಆ ರೀತಿ ಆಗಿಲ್ಲ ಎನ್ನುತ್ತಾರೆ. ಆ ರೀತಿ ಆಕೆ ಬಿದ್ದು ಮಾಡಿಕೊಂಡಂತಹ ಗಾಯಗಳೇ ನಿಪಿ.3 ಮತ್ತು 4 ಪೋಟೋಗಳಲ್ಲಿ ಕಂಡು ಬರುವ ಗಾಯಗಳು ಎಂದರೆ ಸರಿಯಲ್ಲ. ಫ್ರಾಸಾ.1 ರವರು ಈ ದಿನ ನಿಮ್ಮೊಂದಿಗೆ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ಫ್ರಾಸಾ.1 ರವರಿಗೆ ಯಾವುದೇ ಕಷ್ಟ ಬಂದರೆ ನೀವು ಅವರಿಗೆ ಸಹಾಯ ಮಾಡುತ್ತೀರಿ ಎಂದರೆ ಸರಿ.

9. ಯಶೋದಾಳ ಶವದ ಮೇಲೆ ಗಾಯಗಳು ಕಂಡು ಬಂದಿದ್ದರಿಂದ ಆರೋಪಿಯೇ ಆಕೆಯ ಕತ್ತನ್ನು ಹಿಸುಕಿ ಮತ್ತು ಹೊಡೆದು ಕೊಲೆ ಮಾಡಿರಬಹುದು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಪ್ರಾಸಾ.1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಆ ರೀತಿ ಸುಳ್ಳು ಹೇಳಿದ್ದೀರಿ ಎಂದರೆ ಸರಿಯಲ್ಲ.

10. ನೀವು ಪ್ರಾಸಾ.3 ರವರನ್ನು ವಿಚಾರಿಸಿದ್ದಾಗಿ ಆಗ ಅವರು ಹಿಂದಿನ ದಿನ ಅಂದರೆ ದಿ.15.11.2022 ರ ರಾತ್ರಿ ಯಶೋದ ಮತ್ತು ಆರೋಪಿಯು ಗಲಾಟೆ ಮಾಡಿಕೊಳ್ಳುತ್ತಿದ್ದಾಗಿ ಆಗ ಆತ ಯಶೋಧಾಳಿಗೆ ಬಿ.ಪಿ. ಮಾತ್ರೆಯನ್ನು ಕೊಟ್ಟಿದ್ದಾಗಿ ಆಕೆ ಅದನ್ನು ನುಂಗಿ ಮಲಗಿಕೊಂಡಿದ್ದಾಗಿ ತಿಳಿಸಿದನು, ಮಾರನೆ ದಿನ ಪ್ರಾಸಾ.3 ರವರು ಎದ್ದು ಯಶೋದಳನ್ನು ಎಬ್ಬಿಸಿದಾಗ ಆಕೆ ಎಚ್ಚರಗೊಳ್ಳದಿದ್ದಾಗ ಅಕ್ಕಪಕ್ಕದವರನ್ನು ಕರೆದಿದ್ದಾಗಿ ಪ್ರಾಸಾ.3 ನನಗೆ ತಿಳಿಸಿದನು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ರೀತಿ ಪ್ರಾಸಾ.3 ರವರು ನಿಮಗೆ ಯಾವುದೇ ವಿಚಾರವನ್ನು ತಿಳಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ಯಶೋದಳ ಅಕ್ಕಪಕ್ಕದ ಮನೆಯವರು ಹಿಂದಿನ ದಿನ ರಾತ್ರಿ ಆರೋಪಿ ಮತ್ತು ಯೆಶೋಧಾಳ ನಡುವ ಗಲಾಟೆಯಾಗುತ್ತಿದ್ದಾಗಿ ಮಾತನಾಡಿಕೊಳ್ಳುತ್ತಿದ್ದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆ ರೀತಿ ಮಾತನಾಡುತ್ತಿದ್ದ ಅಕ್ಕಪಕ್ಕದವರ ಹೆಸರು ಏನು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನೀವು ಹೇಳಿದಂತೆ ಅಕ್ಕಪಕ್ಕದವರು ಏನನ್ನೂ ಮಾತನಾಡಿಕೊಳ್ಳದೇ ಇದ್ದರೂ ಸಹ ಸುಳ್ಳು ಹೇಳಿದ್ದೀರಿ

ಎಂದರೆ ಸರಿಯಲ್ಲ. ಫ್ರಾಸಾ.1 ರವರು ನಿಮ್ಮ ಸಂಬಂಧಿಕನಾಗಿರುವ ಕಾರಣ ಆತನಿಗೆ ಸಹಾಯ ಮಾಡಲು ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ನೀವು ಪೋಲೀಸರಿಗೆ ಯಾವುದೇ ಹೇಳಿಕೆಗಳನ್ನು ನೀಡದೇ ಇದ್ದರೂ ಸಹ ನ್ಯಾಯಾಲಯದಲ್ಲಿರುವ ಜಯಪುರ ಪೋಲೀಸರನ್ನು ಕಂಡು ಅವರಿಗೆ ಹೆದರಿಕೊಂಡು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೂ ಮೃತಳ ಸಾವಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಕಾಫಿ ಗಿಡದ ಮೇಲೆ ಬಿದ್ದು ಆದಂತಹ ಗಾಯಗಳಿಂದಾಗಿ ಯಶೋಧ ಮೃತಪಟ್ಟಿದ್ದಾಳೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ